ಅ) ಡಾ. ಬಿ.ಆರ್. ಅಂಬೇಡ್ಕರ್‌ರವರ ಜನ್ಮಶತಾಬ್ದಿ ವರ್ಷದಲ್ಲಿ ಹಾಕಿಕೊಂಡಿರುವ ಸರ್ಕಾರದ ಯೋಜನೆಗಳ ಸಂಖ್ಯೆ ಎಷ್ಟು?

ಆ) ಅನುಷ್ಠಾನಗೊಂಡ ಯೋಜನೆಗಳೆಷ್ಟು?

ಇ) ಈ ಉದ್ದೇಶಕಾಗಿ ಎಷ್ಟು ಹಣವನ್ನು ನಿಗಧಿಪಡಿಸಲಾಗಿದೆ?

ಈ) ಶೇಕಡ 18 ಮಿಸಲಾಗಿಟ್ಟಿರುವ ಹಣವನ್ನು ಈ ಜನ್ಮಶತಾಬ್ದಿ ವರ್ಷಕ್ಕಾಗಿ ನಿಗದಿಪಡಿಸಿರುವುದು ನಿಜವೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) 44

ಆ) ಇಲ್ಲ

ಇ) ಇಲ್ಲಿಯವರೆವಿಗೆ ನಿಗದಿಪಡಿಸಿಲ್ಲ. ಇದಕ್ಕೆ ತಗಲುವ ಅಂದಾಜು ವೆಚ್ಚ 247 ಕೋಟಿ ರೂ.ಗಳು.

ಈ) ಇದು ಪರಿಶೀಲನೆಯಲ್ಲಿದೆ.

ಕಲಾವಿದರಿಗೆ ಮಾಶಾಸನದ ಮಂಜೂರಾತಿ.

1344 – ಶ್ರೀ ಮನೋಹರ ಐನಾಪುರ (ಬೇಳ್ಳೂಳ್ಳಿ). ಮಾನ್ಯ ಯುವಜನ ಸೇವಾ ಕೂಡಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ವೃದ್ಧ ಕಲಾವಿದರಿಗೆ ಕಡೇ ಪಕ್ಷ ಈ ವರ್ಷವಾದರೂ ಮಾಸಾಶನ ಮಂಜೂರು ಮಾಡುವ ಯೋಜನೆಯನ್ನು ಹೊಂದಿದೆಯೇ;

ಆ) ಈ ವರ್ಷದಿಂದಲಾದರೂ ವೃದ್ಧ ಕಲಾವಿದರಿಗೆ ಮಾಸಾಶನ ಮಂಜೂರಾತಿ ಬಗ್ಗೆ ಸರ್ಕಾರದಲ್ಲಿ ಈ ವರ್ಷ ಯಾವುದಾದರೂ ಪ್ರಸ್ತಾವನೆಯಿದೆಯೇ;

ಶ್ರೀ ಎಸ್. ರಮೇಶ್, (ವಾರ್ತಾ, ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಸಚಿವರು) :

ಹೌದು.

ಬಿಜಾಪುರದಲ್ಲಿ ಮುನ್ಸೀಫ್ ನ್ಯಾಯಾಲಯ ಸ್ಥಾಪನೆ ಬಗ್ಗೆ.

1345 – ಶ್ರೀ ಮನೋಹರ್ ಐನಾಪುರ್ (ಬೇಳ್ಳೂಳ್ಳಿ). ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರಕ್ಕೆ ಹೆಚ್ಚುವರಿ ಮುನ್ಸಿಫ್ ಕೋರ್ಟ್ ಸ್ಥಾಪಿಸಲು ಪ್ರಸ್ತಾವನೆಯನ್ನು ಕಳುಹಿಸಲಾಗಿದೆಯೆ?

ಆ) ಸರ್ಕಾರ ಈ ಬಗ್ಗೆ ಅನುಮತಿ ನೀಡಲು ಉದ್ದೇಶಿಸಿದೆಯೆ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಉಚ್ಚ ನ್ಯಾಯಾಲಯದಿಂದ ಹೆಚ್ಚುವರಿ ಕೋರ್ಟ್‌ಗಳನ್ನು ಸ್ಥಾಪಿಸಲು ಈಗಾಗಲೇ ಅನೇಕ ಪ್ರಸ್ತಾವಗಳು ಸರ್ಕಾರದ ಮುಂದಿರುತ್ತದೆ, ಅದರೆ ಎಲ್ಲ ಪ್ರಸ್ತಾವಗಳನ್ನು ಸಧ್ಯಕ್ಕೆ ಮಂಜೂರು ಮಾಡಲು ಆಗುವುದಿಲ್ಲ. ದೊರೆಯುವ ಸಂಪನ್ಮೂಲಗಳನ್ನು ಅನುಸರಿಸಿ ಎಲ್ಲೆಲ್ಲಿ ಅತ್ಯವಶ್ಯಕವಾಗಿ ಹೆಚ್ಚುವರಿ ಕೋರ್ಟ್‌ಗಳನ್ನು ಸ್ಥಾಪಿಸಬೇಕಾದ ಅವಶ್ಯಕತೆ ಇದೆಯೋ ಅಂಥಹ ಸ್ಥಳಗಳಲ್ಲಿ ಮಾತ್ರ ಹೆಚ್ಚುವರಿ ಕೋರ್ಟ್‌ಗಳನ್ನು ಸರ್ಕಾರ ಮಂಜೂರು ಮಾಡಲು ಪರಿಶೀಲಿಸಲಾಗುವುದು.